**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**ಸಿ.ಸಿ. ನಂ.1015/2021 ಫ್ರಾ.ಸಾ –6**

**ಚಾ.ಸಾ – 8**

**ದಿನಾಂಕಃ 04.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಗಣೇಶ್ |
| ತಂದೆಯ ಹೆಸರು | : | ಅಣ್ಣಾಜಪ್ಪ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಪೋಲೀಸ್ ಪೇದೆ |
| ವಾಸ ಸ್ಥಳ | : | ಕುಶಾಲನಗರ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ನಾನು 2012 ರಿಂದ 2021ರವರೆಗೂ ಶ್ರೀಮಂಗಲ ಪೊ.ಠಾಣೆಯಲ್ಲಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 27.06.2021 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ 9 ರವರು ಕುಮಟೂರು ಗ್ರಾಮದ ಚಾಸಾ 2 ರಿಂದ 4 ರ ಸಮಕ್ಷಮ ಮಹಜರ್ ಮಾಡಿ ಅವರ ಮನೆಯ ಮುಂದೆ ಸ್ಥಳ ಮಹಜರ್ ವೇಳೆ ತನಿಖಾಧಿಕಾರಿಯವರ ಆದೇಶದಂತೆ ನಾನು ಇಲಾಖಾ ಕ್ಯಾಮಾರಾದಲ್ಲಿ ಫೋಟೋ ತೆಗೆದಿರುತ್ತೇನೆ. ಪ್ರಿಂಟ್ ಹಾಕಿಸಿ ತನಿಖಾಧಿಕಾರಿಯವರಿಗೆ ಕೊಟ್ಟಿರುತ್ತೇನೆ. ಅದರಂತೆ Electronic evidence ಪ್ರಮಾಣ ಪತ್ರ ನೀಡಿದ್ದೇನೆ. ಅದನ್ನು ನಿ.ಪಿ.13 ಸಹಿಯನ್ನು 13 (ಎ) ಎಂದು ಗುರುತಿಸಲಾಯಿತು. ಫೋಟೋಗಳಾದ 6, 9, 12 ಅನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. KGA ವಕೀಲರಿಂದಃ**

ಮಹಜರ್ ವೇಳೆ ನಾನು ಪೋಟೋ ತೆಗೆದಿಲ್ಲ ಎಂದೆ ಸರಿಯಲ್ಲ. ಆರೋಪಿಯು ಯಾವ ಕೃತ್ಯ ಮಾಡಿಲ್ಲ, ಆ ಸ್ಥಳದಲ್ಲಿ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರಿಗೆ ಹೇಳಿಕೆ ಕೊಟ್ಟಿಲ್ಲ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾರಿಯವರ ಒತ್ತಾಯಕ್ಕೆ ಬಂದು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಸಾಕ್ಷ್ಯಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ